# ಕರ್ನಾಟಕ ವಿಧಾನ ಪರಿಷತ್ತು

## ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಪಿ.ವಿ.ಮೋಹನ್ (ವಿಧಾನ ಸಭೆ ಚುನಾವಣಾ ಕ್ಷೇತ್ರ) ಇವರು ನಿಯಮ-330ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.

### ಪ್ರಶ್ನೆ:

ಮಂಗಳೂರಿನ UGD ಸಮಸ್ಯೆಯನ್ನು ಕೇವಲ ಒಳಚರಂಡಿಯ ಸಮಸ್ಯೆ ಎಂದು ಪರಿಗಣಿಸಲು ಸಾಧ್ಯವಿಲ್ಲ. ಇದು ನೀರು, ಆರೋಗ್ಯ, ಪರಿಸರ, ಸಾರ್ವಜನಿಕ ಹಣ ಮತ್ತು ಜನರ ನಂಬಿಕೆಯ ಪ್ರಶ್ನೆ, ರಸ್ತೆಯ ಕೆಳಗೆ ಹಾದುಹೋಗುವ ಒಳಚರಂಡಿ ಪೈಪ್ ಸೋರಿಕೆಯಾಗಿ ಅದರ ಪರಿಣಾಮ ಮೇಲ್ಮೈಯಲ್ಲಿರುವ ಮನೆಯ ಬಾವಿ ಅಥವಾ ದೇವಸ್ಥಾನದ ತೀರ್ಥದ ಬಾವಿಗೆ ತಲುಪುವ ಪರಿಸ್ಥಿತಿ ಯಾವುದೇ ಕಾರಣಕ್ಕೂ ಒಪ್ಪಿಕೊಳ್ಳಲಾಗದು. ಜನರು ತಮ್ಮ ಮನೆಗಳ ಬಾವಿಯ ನೀರನ್ನು ಸುರಕ್ಷಿತವೆಂದು ನಂಬಬೇಕು. ಭಕ್ತರು ದೇವಸ್ಥಾನದ ತೀರ್ಥವನ್ನು ಯಾವುದೇ ಅನುಮಾನವಿಲ್ಲದೆ ಸ್ವೀಕರಿಸುವಂತಿರಬೇಕು.

ಆದ್ದರಿಂದ, ಹಿಂದಿನ ಕಾಮಗಾರಿಗಳ ವೈಫಲ್ಯಕ್ಕೆ ಹೊಣೆಗಾರಿಕೆ ನಿಗದಿಪಡಿಸುವುದರ ಜೊತೆಗೆ, ಕಲುಷಿತಗೊಂಡಿರುವ ಜಲಮೂಲಗಳನ್ನು ಗುರುತಿಸಿ ಪುನಶ್ಚೇತನಗೊಳಿಸುವುದು ಮತ್ತು ಮಂಗಳೂರಿನ ಸಂಪೂರ್ಣ UGD ವ್ಯವಸ್ಥೆಯನ್ನು ವೈಜ್ಞಾನಿಕವಾಗಿ ಪುನರ್ ರಚಿಸುವುದು ಸರ್ಕಾರದ ತುರ್ತು ಆದ್ಯತೆಯಾಗಬೇಕು. ಈ ನಿಟ್ಟಿನಲ್ಲಿ ಸಮಗ್ರ ಪಾರದರ್ಶಕ ಮತ್ತು ಸಮಯಬದ್ಧ ಕಾರ್ಯಯೋಜನೆಯನ್ನು ಸದನದ ಮುಂದೆ ಮಂಡಿಸಿ, ಮಂಗಳೂರಿನ ಜನರ ಆರೋಗ್ಯವನ್ನೂ, ಜಲಮೂಲಗಳನ್ನೂ ಹಾಗೂ ಧಾರ್ಮಿಕ ನಂಬಿಕೆಯನ್ನೂ ರಕ್ಷಿಸಲು ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕು.

ಆದ್ದರಿಂದ ಸದರಿ ವಿಚಾರವು ಸಾರ್ವಜನಿಕವಾಗಿ ಮಹತ್ವವಾಗಿರುವುದರಿಂದ ನಿಯಮ 330ರ ಅಡಿಯಲ್ಲಿ ದಿನಾಂಕ:24.08.2026 ರಂದು ಸದನದಲ್ಲಿ ಚರ್ಚಿಸಲು ಮಾನ್ಯ ನಗರಾಭಿವೃದ್ಧಿ ಸಚಿವರ ಗಮನ ಸೆಳೆದಿರುವ ಕುರಿತು.

### ಉತ್ತರ :

ಮಂಗಳೂರು ಮಹಾನಗರ ಪಾಲಿಕೆಯಿಂದ ಮಂಗಳೂರು ನಗರದ ಭೂಗತ ಒಳಚರಂಡಿ ಯೋಜನೆಯ 1961ನೇ ಸಾಲಿನಲ್ಲಿ ಅಂದಿನ ಜನಸಂಖ್ಯೆ 1.41 ಲಕ್ಷಗಳಿಗೆ ಅನುಗುಣವಾಗಿ ಯೋಜನೆಯನ್ನು 1991ಕ್ಕೆ 2.00 ಲಕ್ಷ ಅಂದಾಜಿತ ಜನಸಂಖ್ಯೆಗೆ ಅನುಗುಣವಾಗಿ ವಿನ್ಯಾಸಗೊಳಿಸಲಾಗಿದೆ. ಈ ಯೋಜನೆಯ ಪ್ರಕಾರ ಸುಮಾರು 170 ಕಿ.ಮೀ ನಷ್ಟು ಉದ್ದಕ್ಕೆ 150 ಮಿ.ಮೀ ರಿಂದ 750 ಮಿ.ಮೀ ವ್ಯಾಸದ ಕೊಳವೆ ಜಾಲ ಮತ್ತು 4000 ಸಂಖ್ಯೆಯ ಮಶಿನ್‌ಹೋಲ್‌ಗಳನ್ನು ನಿರ್ಮಿಸಲಾಗಿದೆ. ಕಾವೂರು ಮತ್ತು ಎಕ್ಕೂರುಗಳಲ್ಲಿ ಕ್ರಮವಾಗಿ 5 MGD ಮತ್ತು 1 MGD ಜಲತ್ಯಾಜ್ಯ ಸಂಸ್ಕರಣ ಘಟಕ (STP) ನಿರ್ಮಿಸಲಾಗಿದೆ. ಕಾವೂರು ಘಟಕಕ್ಕೆ ವೆಟ್ ವೆಲ್ 1 ರಿಂದ 5 ಹಾಗೂ ಎಕ್ಕೂರು ಘಟಕಕ್ಕೆ 6 ಮತ್ತು 7 ವೆಟ್‌ವೆಲ್‌ಗಳಿಂದ ಜಲ ತ್ಯಾಜ್ಯವು ಹರಿದು ಬರುತ್ತದೆ. ಈ ಒಳಚರಂಡಿ ಕೊಳವೆ ಜಾಲವು ಹಳೆಯ ಮುನ್ಸಿಪಲ್ ವಾರ್ಡಿನ ವ್ಯಾಪ್ತಿಯಲ್ಲಿ ಹರಡಿ ಕೊಂಡಿರುತ್ತದೆ. ತದನಂತರ ನಗರವು ಬೆಳೆದಂತೆ ಆಗತ್ಯತೆಗೆ ಅನುಗುಣವಾಗಿ ಒಳಚರಂಡಿ ಜಾಲ ವಿಸ್ತರಣೆ ಮಾಡಲಾಗಿದೆ. ಇದರ ಪ್ರಕಾರ ಪಾಲಿಕೆಯ ಸುಮಾರು 245 ಕಿ.ಮೀ. ನಷ್ಟು ಕೊಳವೆ ಜಾಲ ಮತ್ತು 8000 ಮಶಿನ್ ಹೋಲ್ ಗಳನ್ನು ನಿರ್ಮಿಸಿದೆ.

ಮುಂದುವರೆದು ಪ್ರಸ್ತುತ ಪಾಲಿಕೆ ವ್ಯಾಪ್ತಿಯಲ್ಲಿ ಶೇ.65 ರಷ್ಟು ಪ್ರದೇಶದಲ್ಲಿ ಒಳಚರಂಡಿ ಜಾಲವನ್ನು ನಿರ್ಮಿಸಲಾಗಿದ್ದು 4 ಸಂಖ್ಯೆ ಎಸ್.ಟಿ.ಪಿ ಗಳು 21 ಸಂಖ್ಯೆ ವೆಟ್‌ವೆಲ್‌ಗಳು ಕಾರ್ಯ ನಿರ್ವಹಿಸುತಿರುತ್ತದೆ, ಇದರಲ್ಲಿ 650.00 ಕಿ.ಮೀ. ಒಳಚರಂಡಿ ಜಾಲ ಹಾಗೂ 25,000 ಆಳ ಗುಂಡಿಗಳು ಒಳಗೊಂಡಿರುತ್ತದೆ. ಸದರಿ 650.00 ಕಿ.ಮೀ. ಒಳಚರಂಡಿ ಜಾಲದಲ್ಲಿ 250.00 ಕಿ.ಮೀ. ಒಳಚರಂಡಿ ಜಾಲ 50 ವರ್ಷ ಹಳೆಯದಾಗಿದ್ದು ಕೆಂಪು ಕಲ್ಲಿನ ಮಿಶಿನ್ ಹೋಲ್ ಮತ್ತು ಸ್ಟೋನ್‌ವೇರ್ ಪೈಪ್‌ಗಳನ್ನು 2046ರ ಜನ ಸಂಖ್ಯೆಗೆ ಅನುಗುಣವಾಗಿ ಸಮಗ್ರವಾಗಿ ಅಭಿವೃದ್ಧಿಪಡಿಸುವುದು ಹಾಗೂ 10,000 ಲ್ಯಾಟರೇಟ್ ಆಳುಗುಂಡಿಗಳನ್ನು RCC ಆಳುಗುಂಡಿಗಳನ್ನಾಗಿ ಬದಲಾಯಿಸುವುದು ಅಗತ್ಯವಾಗಿರುತ್ತದೆ. ವೆಟ್‌ವೆಲ್‌ಗಳ ELECTRO MECHANICAL ಉಪಕರಣಗಳನ್ನು ಉನ್ನತೀಕರಿಸುವುದು ಮತ್ತು ಬಜಾಲ್, ಸುರತ್ಕಲ್, ಎಸ್. ಟಿ.ಪಿಗಳು Activated Sludge Process (ASP) ತಂತ್ರಜ್ಞಾನದ ಮೂಲಕ ಕಾರ್ಯನಿರ್ವಹಿಸುತ್ತಿದ್ದು, ಸದರಿ STP ಗಳನ್ನು ಹೊಸ ತಂತ್ರಜ್ಞಾನಕ್ಕೆ ಅಭಿವೃದ್ಧಿಪಡಿಸುವುದು ಅವಶ್ಯಕವಾಗಿರುತ್ತದೆ ಹಾಗೂ ಸಮಗ್ರ ಅಭಿವೃದ್ಧಿಗೆ ರೂ. 840.00 ಕೋಟಿ ಅವಶ್ಯಕತೆ ಇರುತ್ತದೆ.

ಮಂಗಳೂರು ಮಹಾನಗರಪಾಲಿಕೆಯ ವ್ಯಾಪ್ತಿಯಲ್ಲಿ ಒಳಚರಂಡಿ ರಹಿತ ಪ್ರದೇಶದಲ್ಲಿ ಒಳಚರಂಡಿ ಜಾಲವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು 8,000 ಆಳ ಗುಂಡಿಗಳ ನಿರ್ಮಾಣ ಮತ್ತು 185.00 ಕಿ.ಮೀ. ಒಳಚರಂಡಿ ಅಭಿವೃದ್ಧಿಪಡಿಸುವುದು ಅವಶ್ಯಕವಾಗಿರುತ್ತದೆ ಹಾಗೂ ಸಮಗ್ರ ಅಭಿವೃದ್ಧಿಗೆ ರೂ.410.00 ಕೋಟಿ ಅವಶ್ಯಕತೆ ಇರುತ್ತದೆ.

ಪಾಲಿಕೆ ವ್ಯಾಪ್ತಿಯಲ್ಲಿ ನಿರ್ಮಿಸಲಾಗಿರುವ 50 ವರ್ಷಗಳ ಹಳೆಯ ಕೆಂಪು ಕಲ್ಲಿನ ಮಶಿನ್‌ಹೋಲ್ ಮತ್ತು ಸ್ಟೋನ್‌ವೇರ್ ಪೈಪ್‌ಗಳನ್ನು 2046 ರ ಜನಸಂಖ್ಯೆಗೆ ಅನುಗುಣವಾಗಿ ಉನ್ನತೀಕರಿಸಲು ಹಾಗೂ ಒಳಚರಂಡಿ ರಹಿತ ಪ್ರದೇಶದಲ್ಲಿ ಒಳಚರಂಡಿ ಜಾಲವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ಅಂದಾಜು ಮೊತ್ತ ರೂ.1250.00 ಕೋಟಿ ಅವಶ್ಯಕತೆ ಇರುತ್ತದೆ. ಸಾರ್ವಜನಿಕರಿಗೆ ಒಳಚರಂಡಿ ವ್ಯವಸ್ಥೆಯನ್ನು ಮೇಲ್ದರ್ಜೆಗೇರಿಸಿ ಉತ್ತಮ ಸೇವೆಯನ್ನು ನೀಡುವ ನಿಟ್ಟಿನಲ್ಲಿ ರೇಖಾ ಅಂದಾಜು ಪಟ್ಟಿಯನ್ನು ತಯಾರಿಸಿ ಪ್ರಸ್ತಾವನೆಯನ್ನು ದಿನಾಂಕ:07.08.2025 ರಂದು ಮಂಗಳೂರು ಮಹಾನಗರ ಪಾಲಿಕೆಯಿಂದ ಪೌರಾಡಳಿತ ನಿರ್ದೇಶನಾಲಕ್ಕೆ ಸಲ್ಲಿಸಲಾಗಿದ್ದು, ಸದರಿ ಪ್ರಸ್ತಾವನೆಯು ಪೌರಾಡಳಿತ ನಿರ್ದೇಶನಾಲಯದ ಹಂತದಲ್ಲಿ ಪರಿಶೀಲನೆಯಲ್ಲಿದ್ದು, ಸರ್ಕಾರಕ್ಕೆ ಪ್ರಸ್ತಾವನೆ ಸ್ವೀಕೃತಗೊಂಡ ನಂತರ ನಿಯಮಾನುಸಾರ ಪರಿಶೀಲಿಸಿ ಅಗತ್ಯ ಕ್ರಮವಹಿಸಲಾಗುವುದು.

ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತದ(KUIDFC) ವತಿಯಿಂದ ಏಷ್ಯನ್ ಅಭಿವೃದ್ಧಿ ಬ್ಯಾಂಕ್, ಕೇಂದ್ರ ಪುರಸ್ಕೃತ ಅಮೃತ್-1.0, ರಾಜ್ಯ ಸರ್ಕಾರ ಹಾಗೂ ಸ್ಥಳೀಯ ಸಂಸ್ಥೆಗಳ ಸಹಯೋಗದೊಂದಿಗೆ ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣೆ ಹೂಡಿಕೆ ಕಾರ್ಯಕ್ರಮ (KIUWMIP) ಮತ್ತು ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಪರಿಹಾರ ನಿಧಿ (ಎನ್.ಜಿ.ಟಿ) ಜಲಶುದ್ಧಿ ಅಭಿಯಾನ ಯೋಜನೆಗಳಡಿ ಮಂಗಳೂರು ನಗರದಲ್ಲಿ ಅನುದಾನ ಲಭ್ಯತೆ ಅನುಸಾರ ಒಳಚರಂಡಿ ವ್ಯವಸ್ಥೆಯ ಪುನರುಜ್ಜೀವನ /ನಿರ್ಮಾಣ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಕಾಮಗಾರಿಗಳ ವಿವರ ಈ ಕೆಳಗಿನಂತಿದೆ

1. ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣೆ ಹೂಡಿಕೆ ಕಾರ್ಯಕ್ರಮ (KIUWMIP): ಏಷ್ಯನ್ ಅಭಿವೃದ್ಧಿ ಬ್ಯಾಂಕ್, ಕೇಂದ್ರ ಪುರಸ್ಕೃತ ಅಮೃತ್ -1.0, ರಾಜ್ಯ ಸರ್ಕಾರ ಹಾಗೂ ಸ್ಥಳೀಯ ಸಂಸ್ಥೆಗಳ ಸಹಯೋಗದೊಂದಿಗೆ ಅನುದಾನ ಲಭ್ಯತೆ ಅನುಸಾರ ಮಂಗಳೂರು ನಗರದಲ್ಲಿ ಭಾಗಶಃ ಒಳಚರಂಡಿ ಅಭಿವೃದ್ಧಿ ಪಡಿಸಲು ಆದ್ಯತೆಯ ಮೇರೆಗೆ 8 ಒಳಚರಂಡಿ ಕಾಮಗಾರಿ ಪ್ಯಾಕೇಜ್‌ಗಳ ಮುಖಾಂತರ ರೂ.316.44 ಕೋಟಿ ವೆಚ್ಚದಲ್ಲಿ 120.89 ಕಿ.ಮೀ ಒಳಚರಂಡಿ ಜಾಲ ನಿರ್ಮಾಣ, 4 ವೆಟ್ ವೆಲ್‌ಗಳು, 1.5 MLD STP ಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಇದರಲ್ಲಿ 119.54 ಕಿ.ಮೀ ಒಳಚರಂಡಿ ಜಾಲ ನಿರ್ಮಾಣ, 3 ವೆಟ್‌ವೆಲ್‌ಗಳು, 1.5 MLD STP ಪೂರ್ಣಗೊಂಡಿದೆ. ಇಲ್ಲಿಯವರೆಗೆ ರೂ.309.07 ಕೋಟಿಗಳು ವೆಚ್ಚ ಮಾಡಲಾಗಿದ್ದು, ಬಾಕಿ ಕಾಮಗಾರಿಯನ್ನು ಮಾರ್ಚ್-2027ರೊಳಗೆ ಪೂರ್ಣಗೊಳಿಸಲು ಉದ್ದೇಶಿಸಿದೆ. ವಿವರಗಳನ್ನು **ಅನುಬಂಧ**ದಲ್ಲಿ ನೀಡಲಾಗಿದೆ.

2. ಜಲಶುದ್ಧಿ ಅಭಿಯಾನ: ಕೆಯುಐಡಿಎಫ್.ಸಿ ವತಿಯಿಂದ ಜಲಶುದ್ಧಿ ಅಭಿಯಾನದಲ್ಲಿ, ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಪರಿಸರ ಪರಿಹಾರ ನಿಧಿಯಡಿ (ಎನ್.ಜಿ.ಟಿ) ಮಂಗಳೂರು ನಗರದಲ್ಲಿ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ರೂ.40.00 ಕೋಟಿಗಳ ಅನುದಾನ ಮಂಜೂರಾಗಿರುತ್ತದೆ. ಅನುದಾನಕ್ಕೆ ಅನುಗುಣವಾಗಿ 8.17 ಕಿ.ಮೀ ಉದ್ದದ ಪೈಪ್ ಲೈನ್ ದುರಸ್ಥಿ ಕಾಮಗಾರಿ, ಎನ್.ಜಿ.ಟಿ ಮಾನದಂಡಗಳನ್ನು ಅನುಸರಿಸಲು ಪಚನಾಡಿಯಲ್ಲಿ ಪ್ರಸ್ತುತ ಇರುವ 8.75 ಎಂ.ಎಲ್.ಡಿ ASP Technology ತ್ಯಾಜ್ಯ ನೀರು ಸಂಸ್ಕರಣಾ ಘಟಕವನ್ನು SBR Technology ಗೆ ಉನ್ನತೀಕರಿಸುವ ಕಾಮಗಾರಿ ಮತ್ತು ಬಜಾಲ್ ನಲ್ಲಿ ಪ್ರಸ್ತುತ ಇರುವ 20 ಎಂ.ಎಲ್.ಡಿ ASP Technology ತ್ಯಾಜ್ಯ ನೀರು ಸಂಸ್ಕರಣಾ ಘಟಕವನ್ನು ಉನ್ನತೀಕರಿಸುವ ಕಾಮಗಾರಿ ಹಾಗೂ ಅತ್ತಾವರ ನಗರದ ಮನೆಗಳಿಂದ ಹೊರ ಬರುವ ತ್ಯಾಜ್ಯ ನೀರು ತೆರದ ಮಳೆ ನೀರಿನ ಗುಂಡಿಗೆ ಹರಿದು ನದಿ ನೀರನ್ನು ಸೇರಿ ನದಿ ನೀರು ಮಲಿನವಾಗುತ್ತಿರುವುದರಿಂದ ಸದರಿ ತ್ಯಾಜ್ಯ ನೀರನ್ನು, ಅತ್ತಾವರದಲ್ಲಿ ಹೊಸ ವೆಟ್‌ವೆಲ್ ನಿರ್ಮಾಣ ಮಾಡಿ ಸದರಿ ವೆಟ್‌ವೆಲ್‌ಗೆ ಸಾಗಿಸಿ ನಂತರ ಕಾವೂರ್ ತ್ಯಾಜ್ಯ ನೀರು ಸಂಸ್ಕರಣಾ ಘಟಕಕ್ಕೆ ಸಾಗಿಸುವಂತ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಿ, ಗುತ್ತಿಗೆದಾರರಾದ M/s NBM Infratech Pvt. Ltd ರವರಿಗೆ ಕಾರ್ಯಾದೇಶವನ್ನು ನೀಡಲಾಗಿರುತ್ತದೆ. ಕಾಮಗಾರಿ ಪ್ರಗತಿಯಲ್ಲಿದ್ದು ಇಲ್ಲಿಯವರೆಗೆ ರೂ.1.90 ಕೋಟಿಗಳನ್ನು ವೆಚ್ಚಮಾಡಲಾಗಿದೆ. ಕಾಮಗಾರಿಯನ್ನು ಗುತ್ತಿಗೆ ಕರಾರಿನನ್ವಯ ಶೀಘ್ರವಾಗಿ ಪೂರ್ಣಗೊಳಿಸಲು ಕ್ರಮವಹಿಸಲಾಗುವುದು.

ಕಡತ ಸಂಖ್ಯೆ: ನಅಇ 186 ಪಿ.ಆರ್.ಜೆ 2026

**(ಡಾ. ಯತೀಂದ್ರ ಸಿದ್ದರಾಮಯ್ಯ)**
ನಗರಾಭಿವೃದ್ಧಿ ಸಚಿವರು

ಅನುಬಂಧ

**ಅನುಬಂಧ-1- ಮಂಗಳೂರು ನಗರದಲ್ಲಿ ಕ್ವಿಮಿಪ್ ಯೋಜನೆಯಡಿ ಅನುಷ್ಠಾನಗೊಳಿಸಲಾಗುತ್ತಿರುವ ಒಳಚರಂಡಿ ಕಾಮಗಾರಿಗಳ ವಿವರಗಳು**

8 ಕಾಮಗಾರಿಗಳನ್ನು ರೂ. 316.44 ಕೋಟಿಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ರೂ 309.07 ಕೋಟಿಗಳನ್ನು ವೆಚ್ಚಮಾಡಲಾಗಿದೆ.

| ಕ್ರ. ಸಂ | ಕಾಮಗಾರಿಯ ಹೆಸರು | ಗುತ್ತಿಗೆ ಮೊತ್ತ (ರೂ ಕೋಟಿ) | ಕಾಮಗಾರಿ ವಿವರಗಳು | ಭೌತಿಕ ಪ್ರಗತಿ | ಆರ್ಥಿಕ ಪ್ರಗತಿ (ರೂ ಕೋಟಿ) | ಷರಾ |
|---|---|---|---|---|---|---|
| 1 | ಹಾಲಿ ಒಳಚರಂಡಿ ಪಂಪಿಂಗ್ ಮೈನ್ ಪೈಪಲೈನ್ ಬದಲಿ ಕಾಮಗಾರಿ | 84.56 | ಪೈಪ್ ಲೈನ್-11 ಕಿ.ಮೀ | 100 | 84.50 | ಕಾಮಗಾರಿಯು ಪೂರ್ಣಗೊಂಡಿದೆ |
| 2 | ಒಳಚರಂಡಿ ವ್ಯವಸ್ಥೆಯ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಮಗಾರಿ (ವಲಯ 3&5) | 22.40 | ಪೈಪ್ ಲೈನ್-13.92 ಕಿ.ಮೀ, ಮೆಹಿನ್ ಹೋಲ್-512 ಸಂಖ್ಯೆ ಇನ್ಸ್ಪೆಕ್ಷನ್ ಚೆಂಬರ್-34 ಸಂಖ್ಯೆ | 100 | 22.40 | ಕಾಮಗಾರಿಯು ಪೂರ್ಣಗೊಂಡಿದೆ |
| 3 | ಮಂಗಳೂರು ನಗರದ ವಲಯ 9,12&13 ಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಒದಗಿಸುವುದು. | 23.56 | ಪೈಪ್ ಲೈನ್-17.72 ಕಿ.ಮೀ, ಮೆಹಿನ್ ಹೋಲ್ -659 ಸಂಖ್ಯೆ ಇನ್ಸ್ಪೆಕ್ಷನ್ ಚೆಂಬರ್-296 ಸಂಖ್ಯೆ | 100 | 23.56 | ಕಾಮಗಾರಿಯು ಪೂರ್ಣಗೊಂಡಿದೆ |
| 4 | ಸುರತ್ಕಲ್ ಒಳಚರಂಡಿ ವ್ಯವಸ್ಥೆಯ ಪುನಃಶ್ಚೇತನ ಮತ್ತು ಮಿಸ್ಸಿಂಗ್ ಲಿಂಕ್‌ಗಳಿಗೆ ಒಳಚರಂಡಿ ವ್ಯವಸ್ಥೆಯನ್ನು ಒದಗಿಸುವುದು. | 77.59 | ಪೈಪ್ ಲೈನ್-27.40 ಕಿ.ಮೀ, ಮೆಹಿನ್ ಹೋಲ್ -1569 ಸಂಖ್ಯೆ ರಿಟೇನಿಂಗ್ ವಾಲ್-2.93 ಕಿ.ಮೀ | 100 | 77.59 | ಕಾಮಗಾರಿಯು ಪೂರ್ಣಗೊಂಡಿದೆ |
| 5 | ಮಂಗಳೂರು ನಗರದ ವಲಯ 3 & 5 ರ uncovered area ದಲ್ಲಿ ಒಳಚರಂಡಿ ಕಾಮಗಾರಿ | 19.00 | ಪೈಪ್ ಲೈನ್-12.02 ಕಿ.ಮೀ, ಮೆಹಿನ್ ಹೋಲ್ -505 ಸಂಖ್ಯೆ, ಇನ್ಸ್ಪೆಕ್ಷನ್ ಚೆಂಬರ್-19 ಸಂಖ್ಯೆ | 100 | 18.94 | ಕಾಮಗಾರಿಯು ಪೂರ್ಣಗೊಂಡಿದೆ |
| 6 | ಹಾಲಿ ಒಳಚರಂಡಿ ವ್ಯವಸ್ಥೆಯ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಮಗಾರಿ (ವಲಯ7) | 22.64 | ಪೈಪ್ ಲೈನ್-10.41ಕಿ.ಮೀ, ಮೆಹಿನ್ ಹೋಲ್ -450 ಸಂಖ್ಯೆ, ಇನ್ಸ್ಪೆಕ್ಷನ್ ಚೆಂಬರ್-7 ಸಂಖ್ಯೆ | 93 | 21.56 | ಕಾಮಗಾರಿಯು ಪೂರ್ಣಗೊಂಡಿದೆ |
| 7 | ಮಂಗಳೂರು ನಗರದ ವಲಯ 5 ರ MSEZ R & R colony ದಲ್ಲಿ ಒಳಚರಂಡಿ | 15.63 | ಪೈಪ್ ಲೈನ್-4.30 ಕಿ.ಮೀ, ಮೆಹಿನ್ ಹೋಲ್ – 15 ಸಂಖ್ಯೆ, ವೆಟ್ ವೆಲ್-3 ಸಂಖ್ಯೆ | 100 | 14.26 | ಕಾಮಗಾರಿಯು ಪೂರ್ಣಗೊಂಡಿದೆ (ಪ್ರಾಯೋಗಿಕ |

| ಕ್ರ. ಸಂ | ಕಾಮಗಾರಿಯ ಹೆಸರು | ಗುತ್ತಿಗೆ ಮೊತ್ತ (ರೂ ಕೋಟಿ) | ಕಾಮಗಾರಿ ವಿವರಗಳು | ಭೌತಿಕ ಪ್ರಗತಿ | ಆರ್ಥಿಕ ಪ್ರಗತಿ (ರೂ ಕೋಟಿ) | ಷರಾ |
|---|---|---|---|---|---|---|
| | ಕಾಮಗಾರಿ | | 1.5 MLD ತ್ಯಾಜ್ಯ ನೀರು ಸಂಸ್ಕರಣಾ ಘಟಕ | | | ಕಾರ್ಯಾಚರಣೆ ಹಂತದಲ್ಲಿದೆ). |
| 8 | ಒಳಚರಂಡಿ ವ್ಯವಸ್ಥೆಯ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಮಗಾರಿ (ವಲಯ 1,4 &7) | 30.58 | ಪೈಪ್ ಲೈನ್-8.68 ಕಿ.ಮೀ, ಮೆಹಿನ್ ಹೋಲ್ -350 ಸಂಖ್ಯೆ, ಇನ್ಸ್ಪೆಕ್ಷನ್ ಚೇಂಬರ್-5 ಸಂಖ್ಯೆ ವೆಟ್ ವೆಲ್-1 ಸಂಖ್ಯೆ | 80.20 | 25.78 | ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಮಾರ್ಚ್-2027 ರೊಳಗೆ ಪೂರ್ಣಗೊಳಿಸಲು ಉದ್ದೇಶಿಸಿದೆ. |
| ಒಟ್ಟು (Incl. expenditure of Terminated works (14.88 Cr + 5.60 Cr)) | | 316.44 | | | 309.07 | |

ಕಾರ್ಯಕಾರಿ ವ್ಯವಸ್ಥಾಪಕರು
ಕ್ವಿಮಿಪ್, ಕೆಯುಐಡಿಎಫ್‌ಸಿ
ಬೆಂಗಳೂರು